755 ಶ್ರೀ ಪಾಟೀಲ್ ಎ ಬಿ (ಸಂಕೇಶ್ವರ್) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದ ಅನುದಾನಿತ ಕಾಲೇಜುಗಳಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಈ ಮೂರೂ ವಿಭಾಗಗಳ ಉಪನ್ಯಾಸಕರ ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದರೆ ಹುದ್ದೆಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ,

ಇ) ಕ್ರಮ ಕೈಗೊಳ್ಳದಿದ್ದರೆ, ಯಾವಾಗ ಉಪನ್ಯಾಸಕರ ಹುದ್ದೆಗಳನ್ನು ತುಂಬಲಾಗುವುದು?

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ಹೌದು

ಆ) ಸರ್ಕಾರದ ಆದೇಶ ಸಂಖ್ಯೆ ಇಡಿ 46 ಎಸ್‌ಇಪಿ 2006, ದಿನಾಂಕ 12 04 2006 ರಲ್ಲಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ 282 ಅನುದಾನಿತ ಉಪನ್ಯಾಸಕ ಹುದ್ದೆಗಳನ್ನು ತುಂಬಿಕೊಳ್ಳಲು ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಲಾಗಿದೆ

ಇ) ಮೇಲೆ 'ಅ' ನಲ್ಲಿ ನೀಡಿರುವ ಉತ್ತರದನ್ವಯ ಉದ್ಭವಿಸುವುದಿಲ್ಲ

987 (589) ಶ್ರೀ ಚನ್ನಬಸವರಾಜ್(ಅಪ್ಪಾಜಿ) ಶಂಕರರಾವ್ ನಾಡಗೌಡ ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪೂರ ಅಣೆಕಟ್ಟಿನ ಹಿನ್ನೀರಿನಿಂದ ಹೆಚ್ಚುವರಿ ಪ್ರದೇಶಗಳು ಮುಳುಗಡೆಯಾಗುವುದೇ,

ಆ) ಹಾಗಿದ್ದಲ್ಲಿ ಯಾವ ಯಾವ ಹಳ್ಳಿಗಳು ಹೆಚ್ಚುವರಿಯಾಗಿ ಮುಳುಗಡೆಯಗುತ್ತವೆ,

ಇ) ಈ ರೀತಿ ಮುಳುಗಡೆಯಾದ ಪ್ರದೇಶಗಳ ರೈತರಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು,

ಈ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಹೆಚ್ಚುವರಿ ಹಿನ್ನೀರಿನಿಂದ ಮುಳುಗಡೆಯಾಗಿರುವ ರೈತರಿಗೆ ಪರಿಹಾರ ನೀಡಲಾಗಿದೆಯೇ?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಹೌದು, 2005–06ರಲ್ಲಿ ಮಹಾಪೂರ ಬಂದಿದ್ದಾಗ ಹುನಗುಂದ ತಾಲ್ಲೂಕಿನ 11 ಗ್ರಾಮಗಳು ಮತ್ತು ಬಾಗಲಕೋಟೆ ತಾಲ್ಲೂಕಿನ 3 ಗ್ರಾಮಗಳು ಹಾನಿಗೊಳಗಾಗಿರುವುದರ ಕುರಿತು ಪರಿಶೀಲಿಸಲಾಯಿತು ಮಹಾಪೂರ ಬಂದ ಸಮಯದಲ್ಲಿ ಸದರಿ ಗ್ರಾಮಗಳ ಸಮೀಕ್ಷೆ ಮಾಡಲಾಗಿ ಬಾಗಲಕೋಟೆ ತಾಲ್ಲೂಕಿನ ಬೊಮ್ಮಣಗಿ ಗ್ರಾಮ ಮತ್ತು ಹುನಗುಂದ ತಾಲ್ಲೂಕಿನ ಕಟಗೂರು, ತುರಡಗಿ ಗ್ರಾಮಗಳ ಕಟ್ಟಡಗಳು ಮಾತ್ರ ಬಾದಿತಗೊಂಡಿದ್ದರಿಂದ ಸ್ಥಳಾಂತರಗೊಳಿಸುವ ಪ್ರಸ್ತಾವನೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಿಂದ ಸರ್ಕಾರಕ್ಕೆ ಸಲ್ಲಿಸಲಾಗಿತ್ತು ಸರ್ಕಾರವು ಆದೇಶ ಸಂ ಕಂಇ/ 224/ ಆರ್‌ಇಹೆಚ್/ 2005, ಬೆಂಗಳೂರು ದಿನಾಂಕ 04 01 2007 ರಲ್ಲಿ ಮೂರು ಗ್ರಾಮಗಳನ್ನು ಸ್ಥಳಾಂತರಿಸಲು ಆದೇಶ ನೀಡಿರುತ್ತದೆ ಉಳಿದ ಹಳ್ಳಿಗಳ ಕಟ್ಟಡಗಳು ಹಾನಿಗೊಳಗಾಗದೇ ಇರುವುದರಿಂದ ಸ್ಥಳಾಂತರದ ಅವಶ್ಯಕತೆಯಿರುವುದಿಲ್ಲವೆಂದು ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ಅಭಿಪ್ರಾಯಪಡಲಾಗಿದೆ ಪುನಃ ಎಫ್ ಆರ್ ಎಲ್ ಸರ್ವೆ ಕಾರ್ಯ ಕೈಗೊಂಡಿದ್ದು, ಮಾರ್ಚ್ 2007 ರೊಳಗಾಗಿ ಪೂರ್ಣಗೊಳ್ಳುವ ಸಾಧ್ಯತೆ ಇದ್ದು, ಹೆಚ್ಚುವರಿ ಮುಳುಗಡೆ ಕುರಿತು ನಿಖರವಾದ ವಿವರ ಲಭ್ಯವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಈ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಹೆಚ್ಚುವರಿ ನೀರಿನಿಂದ ಮುಳುಗಡೆಯಾಗಿರುವ ರೈತರ ಕುರಿತು ನಿಖರ ಮಾಹಿತಿಯು ಸರ್ವೆ ಕಾರ್ಯ ಮುಗಿದ ನಂತರ ಲಭ್ಯವಾಗುವುದು ಇಂತಹ ಪ್ರಕರಣಗಳು ಇದ್ದಲ್ಲಿ ಪರಿಹಾರ ನೀಡುವ ಬಗ್ಗೆ ಪರಿಶೀಲಿಸಲಾಗುವುದು

989 (756) ಶ್ರೀ ಪಾಟೀಲ್ ಎ ಬಿ (ಸಂಕೇಶ್ವರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸಂಕೇಶ್ವರ ವಿಧಾನ ಸಭಾ ಕ್ಷೇತ್ರದಲ್ಲಿ 2003 ಶೈಕ್ಷಣಿಕ ವರ್ಷದಿಂದ ಎಷ್ಟು ನೂತನ ಶಾಲಾ ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು,

ಆ) ಇದಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು,

ಇ) ಈ ದಿಸೆಯಲ್ಲಿ ಇದುವರೆವಿಗೂ ಆದ ಪ್ರಗತಿ ಏನು,